## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ

## ನ್ಯಾಯಾಲಯ, ಶಿಡ್ಲಘಟ್ಟ

## ಸಿ ಸಿ ನಂ. 613/2012

ಪ್ರಾ.ಸಾ.:- 7
ಚಾ.ಸಾ :- 6

| | |
|---|---|
| ಸಾಕ್ಷಿಯ ಹೆಸರು | ಡಾ. ದನಂಜಯ ಕೆ.ಎಸ್ |
| ತಂದೆಯ ಹೆಸರು | ಲೇಟ್ ಶಿವಕಂತಯ್ಯ |
| ವಯಸ್ಸು | 46 ವರ್ಷ |
| ಉದ್ಯೋಗ | ವೈದ್ಯಾಧಿಕಾರಿ, |
| ವಾಸಸ್ಥಳ | ಶಿಡ್ಲಘಟ್ಟ |

ಪ್ರಮಾಣ ವಚನ ಬೋಧಿಸಿದ ದಿನಾಂಕ:04.08.2022

**ಮುಖ್ಯ ವಿಚಾರಣೆ:- ಮಾನ್ಯ ಸ.ಸ.ಅ ರವರಿಂದ:-**

ನಾನು ಸೆಪ್ಟೆಂಬರ್ **2010** ರಿಂದ ಜುಲೈ **2017** ರವರೆಗೂ ಪ್ರಾಥಮಿಕ ಆರೋಗ್ಯ ಕೇಂದ್ರ, ನಂದಗುಡಿ ಹೊಸಕೋಟೆ ತಾಲೂಕಿನಲ್ಲಿ ವೈದ್ಯಾದಿಕಾರಿಯಾಗಿ ಕರ್ತವ್ಯ ನಿರ್ಹಿಸಿರುತ್ತೇನೆ.

ದಿ:**07.04.2012** ರಂದು ಚಾಸಾ. **1** ರವರು ಹಲ್ಲೆಗೆ ಒಳಗಾಗಿ ಚಿಕಿತ್ಸೆಗಾಗಿ ನನ್ನ ಬಳಿ ಅದೇ ದಿನ ಮ.**3.40** ಕ್ಕೆ ಬಂದಿದ್ದು ಅವರನ್ನು ಪರೀಕ್ಷಿಸಿ ಚಿಕಿತ್ಸೆಯನ್ನು ನೀಡಿ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿಗೆ ಒಂದು ಗಾಯದ ಪ್ರಮಾಣ ಪತ್ರವನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.**2** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.**2** ಎ ಎಂದು ಗುರುತಿಸಲಾಯಿತು. ನಾನು ಚಾಸಾ.**1** ರವರನ್ನು ಪರೀಕ್ಷಿಸಿದಾಗ ನಿಪಿ.**2** ರಲ್ಲಿ ಹೇಳಿರುವ ಗಾಯಗಳಾದ **1** ರಿಂದ **3** ಕಂಡು ಬಂದಿರುತ್ತದೆ. ಸಾಕ್ಷಿಗೆ ಈಗ ಮು.ಮಾ.**1** ನ್ನು ತೋರಿಸಿ ಸದರಿ ವಸ್ತುವಿನಿಂದ ಹಲ್ಲೆ ನಡೆಸಿದಾಗ ನಿಪಿ.**2** ರಲ್ಲಿ ಹೇಳಿರುವಂತೆ ಗಾಯಗಳಾಗುವ ಸಂಬವ ಇರುತ್ತದೆ ಯೇ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ.

**ಪಾಟೀ ಸವಾಲು:** ಶ್ರೀ ವಿ.ಎಂ.ಎಸ್ ಆರೋಪಿತರ ಪರ ವಕೀಲರಿಂದ :-

ಯಾವುದೇ ವ್ಯಕ್ತಿ ನಡೆದುಕೊಂಡು ಹೋಗುವಾಗ ಎಡವಿ ಬಿದ್ದರೆ ನಿಪಿ.2 ರಲ್ಲಿ ಹೇಳಿರುವ 1 ನೇ ಗಾಯ ರೀತಿ ಗಾಯಗಳಾಗುವ ಸಂಬಂದ ಇರುತ್ತದೆ ಎಂದರೆ ಸರಿ. ಬಿದ್ದಿರುವ ವ್ಯಕ್ತಿ ಮತ್ತೆ ತಲೆ ತಿರುಗಿ ಬದ್ದರೆ ಮತ್ತೊಂದು ತಲೆಯ ಬದಿಯಲ್ಲಿ

ಗಾಯಗಳಾಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಯಾವುದೇ ವ್ಯಕ್ತಿ ನೆಲಕ್ಕೆ ಬಿದ್ದಾಗ ಬೆನ್ನಿಗೆ 3 ನೇ ಗಾಯದ ರೀತಿ ನೋವುಗಳಾಗವುವ ಸಾಧ್ಯ ಇರುತ್ತದೆ ಎಂದರೆ ಸರಿ.

**ಮರು ವಿಚಾರಣೆ : ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರೀಕರಿಸಲಾಯಿತು.)**

**ಓ.ಹೇ.ಕೇ.ಸ. ಇದೆ**

ಪ್ರಧಾನ ಸಿ. ನ್ಯಾ. ಮತ್ತು
ಜೆಎಂಎಫ್, ಶಿಡ್ಲಘಟ್ಟ